# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2113

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 25.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡ ಜಮೀನುಗಳನ್ನು ಮತ್ತು ರಸ್ತೆ, ನಾಗಬನ, ಕಾಲು ದಾರಿ, ನೀರು ದಾರಿ ಇತ್ಯಾದಿ ಪರಂಬೋಕು ವಿವರಗಳನ್ನು ಪಹಣಿ ದಾಖಲೆಗಳಲ್ಲಿ ಇಂದೀಕರಿಸಿ ಭೂಬಳಕೆ ಬದಲಾಯಿಸಿ ಸ್ಥಳೀಯ ಸಂಸ್ಥೆಗಳ ಆಸ್ತಿ/ತೆರಿಗೆ ವಹಿ ಹಾಗೂ ದಾಖಲಾತಿಗಳಿಗೆ ವರ್ಗಾವಣೆಯ ಪ್ರಕ್ರಿಯೆಗಳೇನು ಮತ್ತು ನಿಯಮಗಳಾವುವು? ಇಲಾಖೆಗಳ ನಡುವೆ ಸಮನ್ವಯದ ಕೊರತೆಯನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು? | ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95ರಡಿ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಭೂ ಪರಿವರ್ತನೆ ಆದೇಶ ಹೊರಡಿಸಿದ ನಂತರ ಪಹಣಿಯಲ್ಲಿ ಭೂ.ಪ ಎಂದು ನಮೂದಿಸಲಾಗುತ್ತದೆ.<br><br>ರಸ್ತೆ, ನಾಗಬನ, ಕಾಲು ದಾರಿ, ನೀರು ದಾರಿ ಇತ್ಯಾದಿ ಪೊರಂಬೋಕು ವಿವರಗಳನ್ನು ಕಂದಾಯ ಮೂಲ ದಾಖಲೆಗಳಲ್ಲಿ ಇಂಡೀಕರಿಸಲಾಗಿದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಯೋಜನೆಯಡಿ ಹಾಗೂ ಭೂಸುಧಾರಣೆ ಕಾಯ್ದೆಯಡಿ ಮಂಜೂರಾದ 'ಆದರೆ ಮಂಜೂರಿದಾರರು ಅಥವಾ ಅವರ ವಾರಸುದಾರರ ಸ್ವಾಧೀನದಲ್ಲಿರದ ಜಮೀನುಗಳ ಸಂಖ್ಯೆ ಮತ್ತು ವಿಸ್ತೀರ್ಣವೆಷ್ಟು? ಅವು ಅನಧಿಕೃತವಾಗಿ ಬೇರೆಯವರ ಸ್ವಾಧೀನದಲ್ಲಿದ್ದು, ಕಂದಾಯ ನಿಯಮಗಳಂತೆ ಅವುಗಳು ನಿಜವಾಗಿ ಯಾರಿಗೆ ಸೇರಬೇಕಾಗಿದೆ? ಈ ಬಗ್ಗೆ ಯಾವಾಗ ಕ್ರಮವಹಿಸಲಾಗುವುದು? | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಯೋಜನೆಯಡಿ ಹಾಗೂ ಭೂಸುಧಾರಣೆ ಕಾಯ್ದೆಯಡಿ ಮಂಜೂರಾದ ಆದರೆ ಮಂಜೂರಿದಾರರು ಅಥವಾ ಅವರ ವಾರಸುದಾರರು ಸ್ವಾಧೀನದಲ್ಲಿರದ ಪ್ರಕರಣಗಳು ವರದಿಯಾಗಿರುವುದಿಲ್ಲ. |
| (ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 1950ರಿಂದ ಇಲ್ಲಿಯವರೆಗೆ ಯಾವ ಯಾವ (ಡಿಪ್ರೆಸ್‌ಸ್ಡ್ ಕಮ್ಯೂನಿಟಿ) ನಿಮ್ನ ಸಮುದಾಯಗಳಿಗೆ ಎಷ್ಟು ಸಂಖ್ಯೆಯಲ್ಲಿ ಎಷ್ಟು ವಿಸ್ತೀರ್ಣದ ಜಮೀನು ವಿತರಿಸಲಾಗಿದೆ; ಹಕ್ಕುಪತ್ರದಲ್ಲಿರುವ ಷರತ್ತುಗಳೇನು; ಅವು ಪ್ರಸ್ತುತ ಯಾರ ಸ್ವಾಧೀನದಲ್ಲಿವೆ; ಈ ಜಮೀನುಗಳನ್ನು ಭಾಗಶಃ ವಸತಿ/ವಾಣಿಜ್ಯ ಉದ್ದೇಶಗಳಿಗೆ ಭೂಪರಿವರ್ತನೆ ಮಾಡಲು ಇರುವ ತೊಡಕುಗಳೇನು? | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 1950ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಂಚಿಕೆ ಮಾಡಲಾದ ಜಮಿನಿನ ವಿವರ ಈ ಕೆಳಗಿನಂತಿದೆ:-<br><br>ಕ್ರ. ಸಂ. / ಜಿಲ್ಲೆ / ಸಂಖ್ಯೆ / ವಿಸ್ತೀರ್ಣ (ಎಕರೆ)<br>1. / ದಕ್ಷಿಣ ಕನ್ನಡ / 4663 / 5652.34<br>2. / ಉಡುಪಿ / 2799 / 2858.44<br><br>ಜಮೀನು ಮಂಜೂರಾತಿಯಾದ ನಂತರ ನೀಡುವ |

<table>
<tr><td></td><td></td><td>ಹಕ್ಕುಪತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 9ರಲ್ಲಿ ವಿಧಿಸಲಾದ ಷರತ್ತುಗಳು ಅನ್ವಯವಾಗುತ್ತವೆ.<br><br>ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) 1978 ರ ಕಲಂ 4 (2) ರ ಪ್ರಕಾರ ಮಾರಾಟ ಮಾಡಲು ಸರ್ಕಾರದ ಪೂರ್ವಾನುಮತಿ ಕಡ್ಡಾಯವಿರುವುದರಿಂದ ಮಂಜೂರಿದಾರರು/ಸದರಿಯವರ ವಾರಿಸುದಾರರ ಸ್ವಾಧೀನದಲ್ಲಿರುತ್ತದೆ. ಸರ್ಕಾರದ ಪೂರ್ವಾನುಮತಿ ಮೇರೆಗೆ ಜಮೀನು ಮಾರಟವಾದ ಪ್ರಕರಣಗಳಲ್ಲಿ ಖರೀದಿದಾರರ ಸ್ವಾಧೀನದಲ್ಲಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 06 ಎಲ್ ಜಿ ಪಿ 2022 ದಿನಾಂಕ 05/11/2022 ರಂತೆ ಪಿಟಿಸಿಎಲ್ ಕಾಯ್ದೆಗೆ ಒಳಪಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರಿಗೆ ಮಂಜೂರಾದ ಜಮೀನಿನಲ್ಲಿ 10 ಸೆಂಟ್ಸ್/4 ಗುಂಟೆ ಜಮೀನಿನಲ್ಲಿ ಸ್ವಂತ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲು ಜಿಲ್ಲಾಧಿಕಾರಿಯವರಿಗೆ ಅಧಿಕಾರವಿರುತ್ತದೆ.</td></tr>
<tr><td>(ಈ)</td><td>ಕಂದಾಯ ಇಲಾಖೆಯಿಂದ ಸರ್ಕಾರಿ ಜಾಗಗಳನ್ನು ಮನೆ ನಿವೇಶನ, ಅಕ್ರಮ-ಸಕ್ರಮ ಮುಂತಾದ ಉದ್ದೇಶಗಳಿಗೆ ತ್ವರಿತವಾಗಿ ಹಂಚಿಕೆಯಾಗುತ್ತಿದ್ದರೂ ಸಾರ್ವಜನಿಕ ಉದ್ದೇಶಗಳಿಗೆ ಅಗತ್ಯವಿರುವ ಜಮೀನುಗಳ ಹಂಚಿಕೆಯಲ್ಲಿ ಕುಂಟು ನೆಪ/ಆಕ್ಷೇಪಣೆಗಳ ಆಧಾರದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? ಈ ಕುರಿತು ಸೂಕ್ತ ಮಾರ್ಗಸೂಚಿಗಳನ್ನು ಯಾವಾಗ ರಚಿಸಲಾಗುವುದು?'</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಲಭ್ಯ ಜಮೀನನ್ನು ಆದ್ಯತೆಯ ಗುರುತಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರಂತೆ ಸಂಬಂಧಪಟ್ಟ ಇಲಾಖೆಗೆ ಕಾಯ್ದಿರಿಸಲು ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(3)(i) ರಂತೆ ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.</td></tr>
<tr><td>(ಉ)</td><td>ಇಲ್ಲಿಯವರೆಗೆ ವಿವಿಧ ಉದ್ದೇಶಗಳಿಗೆ ಹಂಚಿಕೆಯಾದ ಸರ್ಕಾರಿ ಜಮೀನೆಷ್ಟು ಅದರಲ್ಲಿ ಮಂಜೂರು ಮಾಡಿದ ಉದ್ದೇಶಕ್ಕೆ ಬಳಕೆ ಮಾಡದ ಪ್ರಕರಣಗಳೆಷ್ಟು; ಈ ಪ್ರಕರಣಗಳಲ್ಲಿ ಮರುಸ್ವಾಧೀನ ಕ್ರಮ ಕೈಗೊಂಡಿದೆಯೇ; ನಿರ್ದಿಷ್ಟ ಅವಧಿಯಲ್ಲಿ ಬಳಕೆ ಮಾಡದಿದ್ದರೆ ಮರುಸ್ವಾಧೀನ ಮಾಡಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು?</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಉದ್ದೇಶಗಳಿಗೆ ಹಂಚಿಕೆಯಾದ ಜಮೀನಿನ ವಿವರ ಈ ಕೆಳಕಂಡಂತಿದೆ:-<br><table><tr><th>ಕ್ರ. ಸಂ.</th><th>ಜಿಲ್ಲೆ</th><th>ವಿಸ್ತೀರ್ಣ (ಎಕರೆ)</th></tr><tr><td>1.</td><td>ದಕ್ಷಿಣ ಕನ್ನಡ</td><td>1985.06</td></tr><tr><td>2.</td><td>ಉಡುಪಿ</td><td>498.37</td></tr></table><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಉದ್ದೇಶಕ್ಕೆ ಮಂಜೂರಾದ ಜಮೀನುಗಳು ಬಳಕೆಯಾಗದ ಪ್ರಕರಣಗಳು ಕಂಡುಬಂದಿರುವುದಿಲ್ಲ.</td></tr>
</table>

| | | |
|---|---|---|
| | | ಮಂಜೂರಾತಿ ಆದೇಶದಲ್ಲಿ ಜಮೀನು ಮಂಜೂರು ಮಾಡಿದ ದಿನಾಂಕದಿಂದ 2 ವರ್ಷದೊಳಗೆ ಸೂಚಿತ ಉದ್ವೇಶಕ್ಕೆ ಬಳಸತಕ್ಕದ್ದು ಎಂದು ಷರತ್ತು ವಿಧಿಸಲಾಗುತ್ತಿದ್ದು, ಮಂಜೂರಾತಿ ಷರತ್ತು ಉಲ್ಲಂಘನೆಯಾದ್ವಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 25(2)ರಂತೆ ಭೂಮಿ ಪಡೆದವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿ, ಮಂಜೂರಾತಿಯನ್ನು ರದ್ದುಪಡಿಸಿ ಸರ್ಕಾರದ ಸ್ವಾಧೀನಕ್ಕೆ ಪಡೆಯಬಹುದಾಗಿರುತ್ತದೆ. |

(ಕಡತ ಸಂಖ್ಯೆ: ಆರ್‌ಡಿ 43 ಎಲ್‌ಜಿಐ 2026)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು